**ಪ್ರಧಾನ ನ್ಯಾಯಿಕ ದಂಡಾಧಿಕಾರಿ ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಮಾಗಡಿ**

**ಕ್ರಿಮಿನಲ್ ಪ್ರಕರಣ ಸಂಖ್ಯೆ : 152 / 2021**

ಪಿರ್ಯಾದುದಾರರು : ಮಾಗಡಿ ಪೋಲಿಸ್ ಠಾಣೆ

**ವಿರುದ್ಧ**

**ಆರೋಪಿ** : **ರಾಮಕೃಷ್ಣಯ್ಯ**
**ಬಿನ್ ಲೇಟ್ ರಂಗಯ್ಯ**
**48 ವರ್ಷಗಳು, ಮೊದಲಾರಯ್ಯನಪಾಳ್ಯ ಗ್ರಾಮ**
**ಕಸಬಾ ಹೋಬಳಿ**
**ಮಾಗಡಿ ತಾಲ್ಲೂಕು.**

**<u>ದೋಷರೋಪಣೆ</u>**

( ಶ್ರೀ ಶ್ರೀನಿವಾಸ ಕೆ.ಆರ್, ಪ್ರಧಾನ ನ್ಯಾಯಿಕ ದಂಡಾಧಿಕಾರಿಯಾದ ನಾನು ನಿಮ್ಮ ಮೇಲೆ ಈ ಕೆಳಕಂಡಂತೆ ದೋಷರೋಪಣೆ ಮಾಡುತ್ತಿದ್ದೇನೆ )

ದಿನಾಂಕಃ 12.12.2020 ರಂದು ಮಧ್ಯಾಹ್ನ 2.45 ಗಂಟೆಯ ಸಮಯದಲ್ಲಿ ಮಾಗಡಿ ಪೋಲಿಸ್ ಠಾಣಾ ಸರಹದ್ದು ಮಾಗಡಿ ತಾಲ್ಲೂಕು ಕಸಬಾ ಹೋಬಳಿ, ಮೊದಲಾರಯ್ಯನಪಾಳ್ಯ ಗ್ರಾಮದ ಬಳಿಯ ಅರಳಿ ಮರದ ಹತ್ತಿರ ಆರೋಪಿ ರಾಮಕೃಷ್ಣಯ್ಯರವರ ಅಂಗಡಿಯಲ್ಲಿ ಯಾವುದೇ ಪರವಾನಗಿ ಇಲ್ಲದೆ ಅಕ್ರಮವಾಗಿ 90 ML ನ ಹೈವಾರ್ಡ್ಸ್ 75 ಪೌಚ್ ಗಳು , 90 ಎಂಎಲ್ ನ ಬ್ಯಾಗ್ಪೈಪರ್ ನ 35 ಪೌಚ್ ಪ್ಯಾಕ್ ಗಳು ಮತ್ತು 180 ಎಂಎಲ್ ನ ಬ್ಯಾಗ್ಪೈಪರ್ 15 ಪೌಚ್ ಪ್ಯಾಕ್ ಗಳ ಮದ್ಯವನ್ನು ಸಂಗ್ರಹಿಸಿಟ್ಟುಕೊಂಡಿದ್ದು, ಸದರಿ ಕೃತ್ಯವು ಕರ್ನಾಟಕ ಅಬಕಾರಿ ಕಾಯ್ದೆ ಕಲಂ-32 ರ ರೀತ್ಯಾ ಶಿಕ್ಷಾರ್ಹ ಅಪರಾಧವಾಗಿದ್ದು, ನನ್ನ ಸಂಜ್ಞೆಗೆ ಒಳಪಡುತ್ತದೆ.

ಎರಡನೇಯದಾಗಿ ಈ ಮೇಲೆ ಹೇಳಿದ ದಿನಾಂಕ, ಸ್ಥಳ ಹಾಗೂ ಅದೇ ಸಮಯದಲ್ಲಿ ಆರೋಪಿತರಾದ ನೀವು ಅಕ್ರಮವಾಗಿ 90 ML ನ ಹೈವಾರ್ಡ್ಸ್ 75 ಪೌಚ್ ಗಳು , 90 ಎಂಎಲ್ ನ ಬ್ಯಾಗ್ಪೈಪರ್ ನ 35 ಪೌಚ್ ಪ್ಯಾಕ್ ಗಳು ಮತ್ತು 180 ಎಂಎಲ್ ನ ಬ್ಯಾಗ್ಪೈಪರ್ 15 ಪೌಚ್ ಪ್ಯಾಕ್ ಗಳ ಮದ್ಯವನ್ನು ತನ್ನ ವಶದಲ್ಲಿಟ್ಟುಕೊಂಡು ಮಾರಾಟ ಮಾಡುತ್ತಿದ್ದು, ಸದರಿ

ಕೃತ್ಯವು ಕರ್ನಾಟಕ ಅಬಕಾರಿ ಕಾಯ್ದೆ ಕಲಂ-34 ರ ರೀತ್ಯಾ ಶಿಕ್ಷಾರ್ಹ ಅಪರಾಧವಾಗಿದ್ದು, ನನ್ನ ಸಂಜ್ಞೆಗೆ ಒಳಪಡುತ್ತದೆ.

ಪ್ರಶ್ನೆ-1 ಃ ನೀವು ಈ ಮೇಲಿನ ಆಪಾದನೆಯನ್ನು ಕೇಳಿದಿರಾ ?

**ಆರೋಪಿಯ ಉತ್ತರ ಃ**

ಪ್ರಶ್ನೆ-2 ಃ ನೀವು ದೋಷರೋಪಣೆ ಒಪ್ಪುಕೊಳ್ಳುತ್ತೀರಾ ಅಥವಾ ಏನಾದರೂ ಹೇಳುವುದಿದೇಯಾ?

**ಆರೋಪಿಯ ಉತ್ತರ ಃ**

( ಈ ಮೇಲ್ಕಂಡ ದೋಷರೋಪಣೆಯನ್ನು ನೀವು ಈ ನ್ಯಾಯಾಲಯದ ಸಂಜ್ಞೆದೊಳಗೆ ಎಸಗಿರುವುದಾಗಿ ಈ ಮೂಲಕ ನ್ಯಾಯಾಲಯದ ವಿಚಾರಣೆಗೆ ಒಳಪಟ್ಟಿರುವುದಾಗಿ ಈ ಮೂಲ ನಿರ್ದೇಶಿಸಿತ್ತೇನೆ )

(ಈ ಮೇಲ್ಕಂಡ ಆರೋಪಿತರ ಹೇಳಿಕೆಯನ್ನು ಅವರಿಗೆ ತಿಳಿಯುವ ಭಾಷೆಯಲ್ಲಿ ಓದಿ, ಹೇಳಿ, ಕೇಳಿ, ಸರಿ ಇದೆ ಎಂದು ನನ್ನ ಸಮಕ್ಷಮ ದಿನಾಂಕಃ 09.06.2023 ರಂದು ಸಹಿ ಮಾಡಿರುತ್ತಾರೆ )

( ಶ್ರೀನಿವಾಸ ಕೆ ಆರ್. )
ಪ್ರಧಾನ ನ್ಯಾಯಿಕ ದಂಡಾಧಿಕಾರಿ ಮತ್ತು
ಜೆಎಂಎಫ್‌ಸಿ ನ್ಯಾಯಾಲಯ, ಮಾಗಡಿ.

ಆರೋಪಿಯ ಸಹಿಃ